**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# C.C.No.526/2019

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕೆಂಡಗಣ್ಣಸ್ವಾಮಿ | CW-03 |
| ತಂದೆಯ /ಗಂಡನ ಹೆಸರು | : | ಸೋಮಣ್ಣ | PW-02 |
| ವಯಸ್ಸು | : | 39 ವರ್ಷ | - |
| ಉದ್ಯೋಗ | : | Head constable | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ: **21.12.2022.** |
| ವಾಸಸ್ಥಳ | : | ಹೆಚ್.ಡಿ.ಕೋಟೆ | - |

**ಮುಖ್ಯ ವಿಚಾರಣೆ: ಎಪಿಪಿ ರವರಿಂದ:**

ನಾನು ದಿನಾಂಕ 28.08.2016 ರಿಂದ 30.08.2022 ರವರೆಗೆ ಸರಗೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕೆಲಸ ಮಾಡಿರುತ್ತೇನೆ. ದಿನಾಂಕ 21.01.2019 ರಂದು ಚಾಸಾ-1 ರವರು ಚಾಸಾ-2 ಮತ್ತು ನನಗೂ ಸುಮಾರು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಇಲಾಖಾ ಜೀಪ್ ನಲ್ಲಿ ಕಟ್ಟೆಹುಣಸೂರು, ಕಲ್ಲಂಬಾಳು , ಹಂಚಿಪುರ ಗ್ರಾಮಗಳ ಕಡೆಗೆ ಗಸ್ತಿಗೆ ಹೋಗಿದ್ದು ಗಸ್ತು ಮುಗಿಸಿಕೊಂಡು ಬರುತ್ತಿರುವ ಸಮಯದಲ್ಲಿ ಸಂಜೆ 4.00 ಗಂಟೆ ಸಮಯದಲ್ಲಿ ಕುಂದೂರು ಮಾರಮ್ಮನ ದೇವಸ್ಥಾನದಲ್ಲಿ ಇಲಾಖಾ ಜೀಪನ್ನು ನೋಡಿ ಒಬ್ಬ ವ್ಯಕ್ತಿ ಸ್ಪ್ಲೆಂಡರ್ ಪ್ಲಸ್ ಕೆಎ 45 ವೈ 8734 ಬರುತ್ತಿದ್ದು ನಮ್ಮನ್ನು ನೋಡಿ ಓಡಲು ಪ್ರಯತ್ನಿಸುತ್ತಿದ್ದು ನಾನು ಚಾಸಾ-1 ಮತ್ತು 2 ರವರು ಆತನನ್ನು ಸುತ್ತುವರೆದು ಹಿಡಿದು ಪೆಟ್ರೋಲ್ ಟ್ಯಾಂಕ್ ಮೇಲೆ ಒಂದು ಬಿಳಿ ಪ್ಲಾಸ್ಟಿಕ್ ಚೀಲವಿದ್ದು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ 90 ಎಂಎಲ್ ನ 76 ವಿಂಡ್ಸರ್ ಡಿಲಕ್ಸ ವಿಸ್ಕಿ ಪೌಚುಗಳು ಇದ್ದದ್ದು ಕಂಡು ಬಂದಿರುತ್ತವೆ. ಆತನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ರತ್ನಯ್ಯ ಬಿನ್ ರಾಜೇಗೌಡ ಕುಂದೂರು ಗ್ರಾಮ ಎಂದು ತಿಳಿಸಿದಾಗ ಮದ್ಯದ ಬಗ್ಗೆ ಚಾಸಾ-1 ರವರು ಪರವಾನಗಿ ಬಗ್ಗೆ ವಿಚಾರಿಸಿದಾಗ ಯಾವುದೇ ಪರವಾನಗಿ ಇಲ್ಲ ಎಂದು ತಿಳಿದು ಬಂದಿರುತ್ತದೆ. ಸದರಿ ಸಾರಾಯಿ ಪೌಚುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣ ಗಳಿಸುವ ಉದ್ದೇಶದಿಂದ ಸಾಗಾಣಿಕೆ ಮಾಡುತ್ತಿರುವುದು ಕಂಡು ಬಂದಿರುತ್ತದೆ. ನಂತರ ಆತನನ್ನು ಬೈಕ್ ಮತ್ತು ಮಾಲುಗಳ ಸಮೇತ ಸಂಜೆ 4.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-1 ಮತ್ತು 2 ರವರು ಠಾಣೆಗೆ ಬಂದು ಚಾಸಾ-10 ರವರ ಮುಂದೆ ಹಾಜರುಪಡಿಸಿರುತ್ತೇವೆ. ಆರೋಪಿತನಿಂದ ವಶಪಡಿಸಿಕೊಂಡ 76 ಸಾರಾಯಿ ಪೌಚುಗಳ ಪೈಕಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು 30 ಪೌಚುಗಳನ್ನು ತೆಗೆದುಕೊಂಡು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ A ಎಂಬ ಅಕ್ಷರದಿಂದ ಸೀಲು ಮಾಡಲಾಗಿರುತ್ತದೆ. ಈ ಬಗ್ಗೆ ನಾನು ಚಾಸಾ-10 ರವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲುಗಳನ್ನು ಮತ್ತು ಪ್ಲಾಸ್ಟಿಕ್ ಚೀಲವನ್ನು ನೋಡಿ ಗುರುತಿಸುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ-10 ರಿಂದ 31 ಎಂದು ಗುರುತಿಸಲಾಗಿದೆ.

ನಿಪಿ-2 ರಿಂದ 5 ಮೋಟರ್ ಸೈಕಲ್ ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಬಿ ರವರಿಂದಃ**

ನಾವು ಕರ್ತವ್ಯಕ್ಕೆ ನಿಯೋಜನೆಗೊಂಡ ಬಗ್ಗೆ ನಮ್ಮ ಠಾಣಾ ಡೈರಿಯಲ್ಲಿ ನಮೂದು ಮಾಡಿರುತ್ತೇವೆ ಎಂದರೆ ಸರಿ. ಠಾಣಾ ಜೀಪನ್ನು ಗಸ್ತು ನಿಮಿತ್ತ ತೆಗೆದುಕೊಂಡು ಹೋಗಬೇಕಾದರೆ ಅದನ್ನು ಠಾಣಾ ಡೈರಿಯಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ಠಾಣಾ ಎಸ್ ಹೆಚ್ ಓ ರವರಿಗೆ ಸಂಬಂಧಿಸಿರುತ್ತದೆ ಎಂದು ನುಡಿಯುತ್ತಾರೆ. ಕುಂದೂರು ಗ್ರಾಮದ ಮಾರಮ್ಮನ ದೇವಸ್ಥಾನ ಜಾಗವು ಜನಸಂದಣಿ ಇರುವ ಜಾಗ ಎಂದರೆ ಸಾಕ್ಷಿಯು ಜನ ಓಡಾಡುತ್ತಾರೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಅಮಾನತ್ತು ಮಹಜರ್ ಮಾಡಿಲ್ಲ ಎಂದರೆ ಸರಿ. ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ನ್ನು ನನ್ನ ಸಮಕ್ಷಮ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಪರ ವಕೀಲರು ಸಾಕ್ಷಿಗೆ ನಿಮ್ಮ ಸಮಕ್ಷಮ ಸ್ಥಳ ಮತ್ತು ಅಮಾನತ್ತು ಮಹಜರ್ ಜರುಗಿಸಿರುತ್ತಾರೆ ಎಂದು ಹೇಳಿದ್ದು ಈ ಸಂಬಂಧ ನೀವು ನಿಮ್ಮ ಸಹಿಯನ್ನು ಸ್ಥಳ ಮತ್ತು ಅಮಾನತ್ತು ಮಹಜರ್ ಹಾಕಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಹಾಕಿಲ್ಲ ಎಂದು ನುಡಿಯುತ್ತಾರೆ.ಆರೋಪಿಯು ಯಾವ ಮದ್ಯದ ಅಂಗಡಿಯಿಂದ ಸಾರಾಯಿ ಪೌಚುಗಳನ್ನು ಖರೀದಿ ಮಾಡಿರುತ್ತಾನೆ ಎಂದು ವಿಚಾರಣೆ ಮಾಡಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಚಾಸಾ-1 ರವರು ಮಾಡಿರುತ್ತರೆ ಎಂದು ನುಡಿಯುತ್ತಾರೆ. ಚಾಸಾ-1 ರವರು ಆರೋಪಿಯ ವಿರುದ್ದ ಸುಳ್ಳು ಪಿರ್ಯಾದು ನೀಡಿದ್ದು ಚಾಸಾ-1 ರವರು ನಮ್ಮ ಠಾಣೆಯ ಮೇಲಾಧಿಕಾರಿಯಾಗಿರುವುದರಿಂದ ಅವರಿಗೆ ಅನುಸರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಅಕ್ರಮವಾಗಿ ಸಾರಾಯಿ ಪೌಚುಗಳನ್ನು ಮಾರಾಟ ಮಾಡುತ್ತಿರಲಿಲ್ಲ ನಾನು ಮತ್ತು ಚಾಸಾ-2 ರವರು ಆತನ ಮೇಲೆ ದಾಳಿ ಮಾಡಿ ಸಾರಾಯಿ ಪೌಚುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ವಿಲೇವಾರಿಯಾಗದೇ ಬಿದ್ದಿದ್ದ ಸಾರಾಯಿ ಪೌಚುಗಳನ್ನು ಈ ಕೇಸಿಗೆ ಅಳವಡಿಸಿ ಚಾಸಾ-1 ರವರಿಗೆ ಅನುಸರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**